**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 1029 /17** **ಪ್ರಾ.ಸಾ – 6**
**ಚಾ.ಸಾ – 10**

**ದಿನಾಂಕ: 10-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ನರಸಿಂಹಯ್ಯ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಹೊಟೇಲ್ ನಲ್ಲಿಕೆಲಸ |
| ವಾಸಸ್ಥಳ | : | ಹರಚನಹಳ್ಳಿ ಗ್ರಾಮ, ಹೊನ್ನವಳ್ಳಿ ಹೋಬಳಿ , ತಿಪಟೂರು ತಾ. |

**<u>ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u> :-**

ಸುಮಾರು 7 ವರ್ಷಗಳ ಹಿಂದೆ ಶ್ರೀನಿಧಿ ಫ್ಯಾಮಿಲಿ ಡಾಬಾದ ಮುಂದೆ ಒಂದು ಅಪಘಾತ ವಾಗಿದ್ದು ಅಲ್ಲಿ ಮೂರು ಕಾರುಗಳು , ಒಂದು ಬಸ್ಸು ಇತ್ತು . ಸದರಿ ಅಪಘಾತ ಹೇಗೆ ಅಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನೊಂದಿಗೆ ಚಾಸ-9 ರವರು ಇದ್ದರು . ಇದನ್ನು ಹೊರತು ಪಡಿಸಿ ನನಗೆ ಬೇರೇನೂ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಅರೋಪಿತರನ್ನು ನೋಡಿದರೆ ಗುರುತಿಸುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

ದಿನಾಂಕ 06-04-2017 ರಂದು ನಾನು ಚಾಸಾ- 21 ರವರ ಸಮಕ್ಷಮ " ದಿನಾಂಕ 13-11-2016 ರಂದು ------------------------------------ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು.

ದಿನಾಂಕ 13-11-2016 ರಂದು ಬೆಳಗಿನ ಜಾವ 4.00 ಗಂಟೆ ಸಮಯದಲ್ಲಿ ನಾನು ಡಾಬದಲ್ಲಿ ಕೆಲಸ ಮಾಡುತ್ತಿದ್ದಾಗ ಎನ್ ಹೆಚ್ 206 ರಸ್ತೆಯಲ್ಲಿ ಕೆ. ಬಿ. ಕ್ರಾಸ್ ಕಡೆಯಿಂದ ತಿಪಟೂರು ನಗರದ ಕಡೆಗೆ ಹೋಗಲು ಬಂದ KA-03MX-7125 ನೇ ಕೆಂಪು ಬಣಣ್ಣದ ಮಾರುತಿ ಸಿಫ್ಟ್ ಕಾರು ರಸ್ತೆಯ ಬದಿಯ ಮರಕ್ಕೆ ಡಿಕ್ಕಿ ಪಡಿಸಿ ಅಪಘಾತ ವಾಗಿದ್ದು ನಾನು ಮತ್ತು ಚಾಸ—9 ರವರು ಹೋಗಿ ನೋಡಲಾಗಿ ಕಾರಿನಲ್ಲಿ ಇಬ್ಬರು ಗಂಡಸರು ಇದ್ದು ಅವರಿಗೆ ಯಾವುದೇ ಗಾಯ ಅಗಿರಲಿಲ್ಲ. ಅಷ್ಟರಲ್ಲಿ ಕೆ. ಬಿ. ಕ್ರಾಸ್ ಕಡೆಯಿಂದ ತಿಪಟೂರು ಕಡೆಗೆ KA-05 Z 4085 ಬಿಳಿ ಬಣ್ಣದ ಮಾರುತಿ ಓಮಿನಿ ಕಾರಿನ ಚಾಲಕ ಅಜಾಗರೂಕತೆಯಿಂದ ಕಾರನ್ನು ರಸ್ತೆಯ ಮೇಲೆ ನಿಲ್ಲಿಸಿಕೊಂಡು ಅಪಘಾತವನ್ನು ನೋಡುತ್ತಿದ್ದು ಅದೇ ವೇಳೆಗೆ ಕೆ. ಬಿ.ಕ್ರಾಸ್ ಕಡೆಯಿಂದ ತಿಪಟೂರು ಕಡೆಗೆ ಬಂದ KA17-F-1722 ನಂಬರಿನ ಬಸ್ಸನ್ನು ಅದರ ಚಾಲಕ ಅತಿವೇಗ ಮತುತ ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಮಾರುತಿ ಓಮಿನಿ ಕಾರಿಗೆ ಮತ್ತು ಸಿಫ್ಟ್ ಕಾರಿಗೆ ಡಿಕ್ಕಿ ಹೊಡೆಸಿ ಅಪಘಾತ ಉಂಟು ಮಾಡಿದನು ಎಂದರೆ ಸರಿಯಲ್ಲ. ಅಗ ಮಾರು ಓಮೀನಿ ಕಾರು ಮುಂಭಾಗ ಇದ್ದ ಒಂದು ಸಿಲವರ್ ಬಣ್ಣದ KA-54-M-3033 ಕಾರಿಗೆ ಡಿಕ್ಕಿಯಾಗಿ ಎಲ್ಲಾ ವಾಹನಗಳು ಜಖಂ ಗೊಂಡಿತ್ತು ಎಂದರೆ ಸರಿಯಲ್ಲ. ಮಾರು ಓಮಿನಿ ಕಾರಿನಲ್ಲಿದ್ದ ಚಾಲಕ ಸೋಮಣ್ಣ ರವರ ಕಾಲಿಗೆ ಮತ್ತು ಇವರ ಪಕ್ಕ ಕಾರಿನ ಮುಂಭಾಗ ಕುಳಿತಿದ್ದ ಮಲ್ಲೇಶಯ್ಯ ರವರ ತಲೆಗೆ ಪೆಟ್ಟು ಬಿದ್ದು ರಕ್ತ ಗಾಯ ಉಂಟಾಗಿದ್ದು ನಾನು ಮತ್ತು ಚಾಸ-9 108 ಆಂಬುಲೆನ್ಸ ನ್ನು ಕರೆಸಿರುತ್ತೇವೆ ಎಂದರೆ ಸ ರಿಯಲ್ಲ.

ಆಗ ಸ್ಥಳದಲ್ಲಿದ್ದ ಸಿಲವರ್ ಬಣ್ಣದ KA-54-M-3033 ಕಾರಿನ ಕಡೆಯವರು ಈ ಅಪಘಾತಕ್ಕೆ ಚಾಸ—1 ರವರು ಕಾರಣ ಎಂದು ಆತನ ಜೊತೆ ಮಾತಿನ ಚಕಾಮಕಿ ನೆಡೆಸುತ್ತಿದ್ದರು ಎಂದರೆ ಸ ರಿಯುಲ್ಲ. ಜಖಂ ಗೊಂಡಿದ್ದ KA-54-M-3033 ಕಾರಿನಲ್ಲಿದ್ದ ಇಬ್ಬರು ಚಾಸ—1 ರವರ ಮೇಲೆ ಜಗಳ ತೆಗೆದು ಅತನ ಕೊರಳ ಪಟ್ಟಿಯನ್ನು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ಗಲಾಟೆ ಮಾಡಿ ಕರ್ತವ್ಯ ನಿರ್ವಹಣೆಗೆ ಅಡ್ಡಿ ಉಂಟು ಮಾಡಿದರು ಎಂದರೆ ಸರಿಯಲ್ಲ. ಆಗ ಚಾಸಾ-8 ರವರು ಜಗಳವನ್ನು ಬಿಡಿಸಲು ಹೊದಾಗ

ಅವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆನಂತರ ಚಾಸಾ-1 ರವರಿಗೆ ಕಾರು ರಿಪೇರಿ ಮಾಡಿಸಿಕೊಡಿ ಎಂದು KA-54-M-3033 ನೇ ಕಾರಿಗೆ ಅರೋಪಿತರು ಎತ್ತಿ ಹಾಕಿಕೊಂಡು ಹೋದರು ಎಂದರೆ ಸರಿಯಲ್ಲ.

ನಂತರ ತಿಳಿಯಲಾಗಿ ಅಪಘಾತಕ್ಕೆ ಸಂಬಂಧಸಿದ KA-54-M-3033 ನೇ ಕಾರಿನಲ್ಲಿದ್ದ ಆರೋಪಿತರು ಚಾಸಾ-1 ರವರನುನ ಅಪಹರಿಸಿಕೊಂಡು ಕೂಗಾಡಿದರೆ ಮುಗಿಸಿ ಬಿಡುತೆತೇವೆಂದು ಕೊಲೆ ಬಿದರಿಕೆ ಹಾಕಿ , ಕೈಗಳಿಂದ ಮೈಕೈಗೆ ಹೊಡೆದರು ಎಂದರೆಸ ರಿಯಲ್ಲ. ಆತನನ್ನು ಕಾರಿನಲ್ಲಿ ಬಂಧನವಿಟ್ಟು ಸುತ್ತಾಡಿಸಿ ನಂತರ ಕೆ. ಬಿ.ಕ್ರಾಸ್ -ತುರುವೇಕೆರೆ ಮಾರ್ಗವಾಗಿ ಕುಣಿಗಲ್ ಗೆ ಕರೆದುಕೊಂಡು ಹೋಗಿ ರಿಪೇರಿಗಾಗಿ ಒಂದೂವರೆ ಲಕ್ಷ ಹಣ ಕೊಡಬೇಕೆಂದು ಒತ್ತಾಯ ಅವರಿಗೆ ಜೀವ ಭಯ ಇದ್ದಿದ್ದರಿಂದ ಹಣ ಇಲ್ಲ ನಂತರದಲ್ಲಿ ಕೊಡುತ್ತೇನೆಂದು ಹೇಳಿದ್ದಕ್ಕೆ ಅವರಲ್ಲಿ ಒಬ್ಬನು ನನಗೆ ಬ್ಯಾಂಕಿನ ಖಾತೆ ಸಂಖ್ಯೆ ನೀಡಿ ಹಣ ಹಾಕುವಂತೆ ಒತ್ತಾಯಿಸಿ ಕುಣಿಗಲ್ ಬಸ್ ನಿಲ್ದಾಣದಲ್ಲಿ ಬಿಟ್ಟು ಹೋದರು ಎಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ.

ಕಾರುಗಳನ್ನು ಮತ್ತು ಬಸ್ಸನ್ನು ನೋಡಿದರೆ ಗುರುತಿಸುವುದಿಲ್ಲ. ಅರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**